11.40 ಎಂ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕಳೆದ ಹನ್ನೆರಡು ವರ್ಷಗಳಿಂದ ಚುನಾವಣೆಯಲ್ಲಿ ಓಟು ಹಾಕುತ್ತಾರೆ, ಅದಕ್ಕೆ ಈಗ ಹೊಸ ಬಡಾವಣೆಗಳನ್ನು ಸಹ ಸೇರಿಸಿಕೊಳ್ಳುತ್ತೀರಿ. ಆದರೆ ಓಟು ಹಾಕುವ ಜನಕ್ಕೆಲ್ಲಾ ನಗರಪಾಲಿಕೆಯಿಂದ ನಾವು ಸೌಲಭ್ಯ ಕೊಡುವುದಿಲ್ಲ. ಓಟಿಗೆ ಮಾತ್ರ ನಗರ ಪಾಲಿಕೆಗೆ ಅವರು ಮತದಾರರು. ಆದರೆ ಸೌಲಭ್ಯದಿಂದ ಅನೇಕರು ವಂಚಿತರಾಗುತ್ತಾರೆ. ಈ ಚುನಾವಣೆಯಲ್ಲಿಯಾದರೂ ಕೂಡ ಯಾರಿಗೆ ಸೌಲಭ್ಯ ಕೊಡುತ್ತೀರಿ ಅವರನ್ನು ಮಾತ್ರ ಮತದಾರರನ್ನಾಗಿ ಮಾಡುತ್ತೀರೋ?

ಶ್ರೀ ಹೆಚ್.ಡಿ. ದೇವೇಗೌಡ : ನೀವು ಬಹಳ ಉಪಯುಕ್ತವಾದ ಸಲಹೆಯನ್ನು ಕೊಟ್ಟಿದ್ದೀರಿ ಓಟನ್ನು ಹಾಕಿಸಿಕೊಂಡ ಮೇಲೆ ಅವರಿಗೆ ಸೌಲಭ್ಯ ಕೊಡಬೇಕಾದದ್ದು ಜವಾಬ್ದಾರಿ. ಅದನ್ನು ಕಾರ್ಪೊರೇಷನ್ ನಿರ್ವಹಣೆ ಮಾಡುತ್ತದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ : 13(259) : 10(238)

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ನಾಲ್ಕು ಪ್ರಶ್ನೆ ಒಂದೇ ತರಹ ಇದೆ. Replies are same and identical.

ಮಾನ್ಯ ಗುರುಪಾದಪ್ಪನವರ ಪ್ರಶ್ನೆ ಮತ್ತು ಹಿರಿಯ ಸದಸ್ಯರಾದ ಮಾನ್ಯ ನಂಜೇಗೌಡರು ಇವರಿಬ್ಬರದು ಸೇಮ್ ಐಡೆಂಟಿಕಲ್ ರಿಪ್ಲೈಸ್ ಬರುತ್ತದೆ. ಆದ್ದರಿಂದ ಅದನ್ನೆಲ್ಲಾ ಒಟ್ಟಿಗೆ ತೆಗೆದುಕೊಳ್ಳೋಣ ಎಂದು ಹೇಳಿದರೆ ತೆಗೆದುಕೊಳ್ಳೋಣ. ಇಲ್ಲ ಎಂದರೆ ನೀವು ಹೇಗೆ ಹೇಳುತ್ತೀರಿ ಹಾಗೆ ಇದಕ್ಕೆ ನಾನು ಉತ್ತರ ಹೇಳುತ್ತೇನೆ.

ಅಧ್ಯಕ್ಷರು : ಹೇಗೆ ಮಾಡೋಮ ನಂಜೇಗೌಡರೇ?

ಶ್ರೀ ಹೆಚ್.ಎನ್. ನಂಜೇಗೌಡ : ಆಯಿತು ಒಟ್ಟಿಗೆ ತೆಗೆದುಕೊಳ್ಳೋಣ. ನನ್ನ ಪ್ರಶ್ನೆ 238ಕ್ಕೆ ಸೇರಿಸಿಕೊಂಡು ಒಟ್ಟಿಗೆ ಉತ್ತರ ಕೊಟ್ಟುಬಿಡಿ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಹಾಕಿದಂತಹ ಪ್ರಶ್ನೆ ಏನಿದೆ ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಉತ್ತರ ಏನಿದೆ ಅದನ್ನು ಓದಿಬಿಡುತ್ತೇನೆ.

ಬಚಾವತ್ ವರದಿ ಪ್ರಕಾರ ನೀರಿನ ಬಳಕೆ

259-ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಚಾವತ್ ವರದಿಯ ಪ್ರಕಾರ 2000ನೇ ಇಸವಿಯೊಳಗೆ ರಾಜ್ಯದ ಪಾಲಿಗೆ ಬರುವ ನೀರಿನ ಸಂಪೂರ್ಣ ಬಳಕೆ ಮಾಡುವ ವಿಶ್ವಾಸ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಇ) ಈ ಸಂಬಂಧವಾಗಿ ನಡೆಯಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಂದಾಜು ಎಷ್ಟು ಹಣ ಖರ್ಚಾಗಲಿದೆ?

ಈ) ಈ ಹಣದ ಸಂಗ್ರಹಣೆಗಾಗಿ ಯಾವ ಯಾವ ಕ್ರಮಗಳನ್ನು ರೂಪಿಸಲಾಗುತ್ತಿದೆ?

ಉ) ನೀರಾವರಿ ಬಾಂಡ್‌ಗಳ ಮೂಲಕ ಹಣವನ್ನು ಸಂಗ್ರಹಿಸಲಾಗುವುದೇ?

ಊ) ಈ ವಿಷಯದ ಬಗ್ಗೆ ಚರ್ಚಿಸಲು ಪ್ರಸಕ್ತ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಎಷ್ಟು ಸಭೆಗಳನ್ನು ಕರೆಯಲಾಗಿದೆ?

ಋ) ಮುಖ್ಯಮಂತ್ರಿಗಳು ಕಾಮಗಾರಿ ನಡೆಯುತ್ತಿರುವ ಯಾವ ಯಾವ ಸ್ಥಳಗಳಿಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿದ್ದಾರೆ ಚರ್ಚಿಸಿದ್ದಲ್ಲಿ ಅದರ ವಿವರಗಳೇನು ?

ೠ) ಸರ್ಕಾರದಲ್ಲಾಗುತ್ತಿರುವ ಅನವಶ್ಯಕ ವೆಚ್ಚಗಳನ್ನು ತಗ್ಗಿಸಿ ನೀರಾವರಿ ಕಾಮಗಾರಿಗಳನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಿ ನಮ್ಮ ಪಾಲಿನ ಒಂದು ತೊಟ್ಟು ನೀರನ್ನು ವ್ಯರ್ಥ ಮಾಡದೆ ಉಪಯೋಗಿಸಿಕೊಳ್ಳುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಇದೆ.

ಆ) ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳನ್ನು 2000 ಇಸವಿಯೊಳಗೆ ಪೂರ್ಣಗೊಳಿಸುವ ಬಗ್ಗೆ ವರ್ಷಾವಾರು ಆರ್ಥಿಕ ಮತ್ತು ಭೌತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇದರನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕೃಷ್ಣಾ ಕೊಳ್ಳದಲ್ಲಿ ನಿರ್ಮಾಣದ ವಿವಿಧ ಹಂತಗಳಲ್ಲಿರುವ ಹಾಗೂ ಇನ್ನು ಮುಂದೆ ಕೈಗೊಳ್ಳಬೇಕಾಗಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಇಂದಿನ ದರಗಳ ಪ್ರಕಾರ ಸುಮಾರು 6,620 ಕೋಟಿ ರೂ.ಗಳ ಅವಶ್ಯಕತೆಯಿದೆ.

ಈ) ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಹಣ ಸಂಗ್ರಹಣೆ ಮಾಡಲು ಅನುವಾಗುವಂತೆ ಕೃಷ್ಣಾ ಭಾಗ್ಯ ಜಲ ನಿಗಮವನ್ನು ಸ್ಥಾಪಿಸಲಾಗಿದೆ. ಕೃಷ್ಣಾ ಕೊಳ್ಳದ ಇತರ ಯೋಜನೆಗಳಿಗೆ ಅವಶ್ಯವಾದ ಹಣವನ್ನು ಒದಗಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಉ) ನೀರಾವರಿ ಬಾಂಡ್‌ಗಳ ಮೂಲಕ ರಾಜ್ಯದ ನೀರಾವರಿ ಯೋಜನೆಗಳಿಗೆ ಹಣ ಸಂಗ್ರಹಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರದ ಒಪ್ಪಿಗೆಯ ಅವಶ್ಯವಿದೆ. ಈ ಪ್ರಸ್ತಾವೆಯನ್ನು ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಇದುವರೆವಿಗೆ ಅನುಮತಿ ದೊರೆತಿಲ್ಲ.

ಊ) ಮುಖ್ಯಮಂತ್ರಿಗಳು ಹಲವಾರು ನೀರಾವರಿ ಯೋಜನೆಗಳ ವಲಯಗಳಿಗೆ ಭೇಟಿ ನೀಡಿ ಯೋಜನೆಗಳ ಪ್ರಗತಿಯ ಬಗ್ಗೆ ಪರಿವೀಕ್ಷಣೆ ಮಾಡಿರುವುದು ಅಲ್ಲದೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳೊಡನೆ ಚರ್ಚಿಸಿದ್ದಾರೆ.

ಋ) ಇದೆ.

ಕೃಷ್ಣಾ ಜಲಾನಯನ ಪ್ರದೇಶ ಯೋಜನೆ

238-ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಸರ್ಕಾರದ ತಯಾರಿಸಿರುವ ಬೃಹತ್ ಯೋಜನೆಯ ಪ್ರಕಾರ ಕೃಷ್ಣಾ ಜಲಾನಯನ ಪ್ರದೇಶದಲ್ಲಿರುವ ನೀರಾವರಿ ಯೋಜನೆಗಳ ಸಂಖ್ಯೆ ಅವುಗಳ ಅಡಿ ನೀರಾವರಿ ಸೌಲಭ್ಯ ಪಡೆಯುವ ಕ್ಷೇತ್ರ ಹಾಗೂ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದಿರುವ ಯೋಜನೆಗಳ ಸಂಖ್ಯೆ ?

ಆ) ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದಿರುವ ಕೃಷ್ಣಾ ಜಲಾನಯನ ಪ್ರದೇಶದಲ್ಲಿನ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಹೆಸರುಗಳನ್ನು ಒದಗಿಸುವುದು ?